**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**

ಓ ಎಸ್ ನಂ. 181/2017          ಡಿ ಡಬ್ಲು – 1

ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯನ್ನು ಇಂದು ದಿನಾಂಕ 13.04.2022 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ** ಪ್ರತಿವಾದಿ ಪರ ವಕೀಲರಿಂದಃ

ಈ ದಿನ ನ್ಯಾಯಾಲಯಕ್ಕೆ ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಈ ಕೆಳಗಿನಂತೆ ನಿಶಾನೆಗಳೆಂದು ಗುರುತಿಸಲಾಯಿತು.

| | |
|---|---|
| ನಿಡಿ 22 | ದಿನಾಂಕ 15.12.2021 ರಂದು ಪೌರಾಯುಕ್ತರು, ಹರಿಹರ ನಗರ ಸಭೆ, ಹರಿಹರ ರವರಿಗೆ ನೀಡಿರುವ ಅರ್ಜಿಯ ಧೃಡಿಕೃತ ನಕಲು. |
| ನಿಡಿ 23 | ಸನ್ 1977-78 ನೇ ಸಾಲಿನ ಪ್ರತಿವಾದ ಪತ್ರ ಸ್ವತ್ತಿಗೆ ಸಂಬಂಧಪಟ್ಟ ಕರ ಅಕರಣೆಯ ರಿಜಸ್ಟರ್ ನ ದೃಡಿಕೃತ ನಕಲು. |
| ನಿಡಿ 24 | ಸನ್ 2001-02 ನೇ ಸಾಲಿನ ಪ್ರತಿವಾದ ಪತ್ರ ಸ್ವತ್ತಿಗೆ ಸಂಬಂಧಪಟ್ಟ ಕರ ಅಕರಣೆಯ ರಿಜಸ್ಟರ್ ನ ದೃಡಿಕೃತ ನಕಲು. |
| ನಿಡಿ 25 ರಿಂದ ನಿಡಿ 27 | 3 ಪೋಟೊಗಳು. |
| ನಿಡಿ 28 | ನಿಡಿ -25 ರಿಂದ 27 ಕ್ಕೆ ಸಂಬಂಧಿಸಿದ ಸಿಡಿ. |

ಪ್ರತಿವಾದ ಪತ್ರದ ಶೆಡ್ಯೂಲ್ ಆಸ್ತಿ ಮುಂಚೆ ಹಳೆ ಹರ್ಲಾಪುರ ಗ್ರಾಮ ಪಂಚಾಯ್ತಿಗೆ ಸೇರಿದ್ದು, ಪ್ರಸ್ತುತ ಈಗ ಹರಿಹರ ನಗರ ಸಭೆ ವ್ಯಾಪ್ತಿಗೆ ಬಂದಿರುತ್ತದೆ.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದ**

(ಈ ಹಂತದಲ್ಲಿ ವಾದಿ ಪರ ವಕೀಲರು ಪಾಟಿಸವಾಲಿಗೆ ಕಾಲಾವಕಾಶ ಕೋರುತ್ತಿದ್ದು ಮಂಜೂರು ಮಾಡಿ ಮುಂದೂಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ